# ಸೆಕ್ಷನ್ 4(1)ಬಿ 8.

# ಸಂಸ್ಥೆಯ ರಚನೆ/ ಸ್ವರೂಪ

ರಸ್ತೆ ಸಾರಿಗೆ ಸಂಸ್ಥೆ ಕಾಯ್ದೆ 1950 ರ ಪರಿಚ್ಛೇದ 5(2) ರ ಅನುಸಾರ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮಂಡಳಿಯಲ್ಲಿ ಅಧ್ಯಕ್ಷರು ಮತ್ತು ಇತರೆ ನಿರ್ದೇಶಕರುಗಳನ್ನು ಒಳಗೊಂಡಂತೆ ಒಟ್ಟು 17 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ಮತ್ತು 5 ಕ್ಕೆ ಕಡಿಮೆ ಇಲ್ಲದಂತೆ ರಾಜ್ಯ ಸರ್ಕಾರವು ನೇಮಕ ಮಾಡುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ನೇಮಿಸಲ್ಪಡುವ ಅಧಿಕಾರಿ ನಿರ್ದೇಶಕರುಗಳು 7.5:1 ರ ಅನುಪಾತದಲ್ಲಿರುತ್ತಾರೆ. ಅಧಿಕಾರೇತರ ನಿರ್ದೇಶಕರು ಪಾರ್ಟ್ ಟೈಂ ನಿರ್ದೇಶಕರಾಗಿರುತ್ತಾರೆ. ಅಧಿಕಾರೇತರ ನಿರ್ದೇಶಕರು ಅಧ್ಯಕ್ಷರಾಗಿ ನೇಮಕಗೊಂಡಲ್ಲಿ ಅವರು ಫುಲ್ ಟೈಂ ಮಂಡಳಿಯ ನಿರ್ದೇಶಕರಾಗಿರುತ್ತಾರೆ. ಸರ್ಕಾರವು ತನ್ನ ಪ್ರತಿನಿಧಿಗಳನ್ನಾಗಿ ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ಜನರನ್ನು ಫುಲ್ ಟೈಂ ನಿರ್ದೇಶಕರನ್ನಾಗಿ ನೇಮಿಸಬಹುದಾಗಿರುತ್ತದೆ. ಅಧಿಕಾರೇತರ ನಿರ್ದೇಶಕರು ಸರ್ಕಾರವು ಇಚ್ಛಿಸುವ ಅವಧಿಯವರೆಗೆ ಮಂಡಳಿಯ ನಿರ್ದೇಶಕರಾಗಿರುತ್ತಾರೆ. ಅಧಿಕಾರಿ ನಿರ್ದೇಶಕರನ್ನು ಸರ್ಕಾರವು ಇಚ್ಛಿಸುವವರೆಗೆ ಅವರ ನೇಮಕದ ಆದೇಶದಲ್ಲಿ ತಿಳಿಸಿದ ಹುದ್ದೆಯ ಅವಧಿಯವರೆಗೆ ಮಂಡಳಿಯ ನಿರ್ದೇಶಕರಾಗಿರುತ್ತಾರೆ.

(1) ಮಂಡಳಿ ಕಾರ್ಯದರ್ಶಿಗಳು ಇಲಾಖೆಯ ಮುಖ್ಯಸ್ಥರಾಗಿ ನೇರವಾಗಿ ವ್ಯವಸ್ಥಾಪಕ ನಿರ್ದೇಶಕರು ಅಧ್ಯಕ್ಷರು ಹಾಗೂ ಇತರೆ ನಿರ್ದೇಶಕರ ನಡುವೆ ಸಂಯೋಜನಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ.

(2) ಮಂಡಳಿ ರಚನೆ & ನೇಮಕಾತಿ ನಿಯಮಾವಳಿಗಳು ರಸ್ತೆ ಸಾರಿಗೆ ಸಂಸ್ಥೆಗಳ (ಕೇಂದ್ರ ಕಾಯ್ದೆ) ಕಾಯ್ದೆ-1950 ರಂತೆ ಹಾಗೂ ಕ.ರಾ.ರ.ಸಾ.ಸಂಸ್ಥೆಯ ನಿಯಮಾವಳಿ-1961ರ ನಿಯಮಾವಳಿಗಳನ್ವಯ ಇರುತ್ತದೆ.

(3) ಮಂಡಳಿಯಲ್ಲಿ ಕನಿಷ್ಟ 5 ಗರಿಷ್ಟ 17ರ ವರೆಗೆ (ಕೇಂದ್ರ ಸರ್ಕಾರದ ಪ್ರತಿನಿಧಿಗಳನ್ನೊಳಗೊಂಡು) ಮಂಡಳಿ ನಿರ್ದೇಶಕರುಗಳು ಇರುವುದಾಗಿರುತ್ತದೆ.

(4) ಮಂಡಳಿಯ ನಿರ್ದೇಶಕರುಗಳ ನೇಮಕಾತಿ ಕುರಿತು ಹಾಗೂ ಮಂಡಳಿಯ ವಿಷಯಗಳ ಕುರಿತು ಸರ್ಕಾರದೊಂದಿಗೆ ವ್ಯವಹರಿಸುವುದು.

(5) ಮಂಡಳಿ ಸಭೆಗೆ ಪ್ರಸ್ತಾವನೆಗಾಗಿ ಮಂಡಿಸಲಿರುವ ವಿಷಯಗಳನ್ನು ಸಂಬಂಧಿಸಿದ ಇಲಾಖೆಗಳಿಂದ ವಿಷಯಗಳನ್ನು ಪಡೆದು ವಿಷಯ ಟಿಪ್ಪಣಿಗಳನ್ನು ಸಿದ್ಧಪಡಿಸುವುದು.

(6) ಮಾನ್ಯ ಅಧ್ಯಕ್ಷರಿಂದ ಮಂಡಳಿ ಸಭೆಯ ದಿನಾಂಕ, ಸ್ಥಳದ ಮತ್ತು ಸಮಯದ ಅಮೋದನೆಯನ್ನು ಪಡೆದು ಸಭೆಯ ಸೂಚನಾ ಪತ್ರವನ್ನು ಎಲ್ಲಾ ಮಂಡಳಿ ನಿರ್ದೇಶಕರುಗಳಿಗೆ ಪತ್ರ ಮುಖಾಂತರ ತಿಳಿಸುವುದು.

(7) ಮಂಡಳಿ ಸಭೆಯಲ್ಲಿ ನಡೆದ ನಡಾವಳಿಗಳನ್ನು ಸಿದ್ಧಪಡಿಸಿ ಮಾನ್ಯ ಅಧ್ಯಕ್ಷರಿಂದ ಅನುಮೋದನೆಯನ್ನು ಪಡೆಯುವುದು.

(8) ಮಂಡಳ ಸಭೆಯ ನಡಾವಳಿಯು ಮಾನ್ಯ ಅಧ್ಯಕ್ಷರ ಅನುಮೋದನೆಯ ನಂತರ ಎಲ್ಲಾ ನಿರ್ದೇಶಕರುಗಳ ಗಮನಕ್ಕಾಗಿ ಕಳುಹಿಸುವುದು.

(9) ಮಂಡಳ ಸಭೆಯ ಠರಾವುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸುವುದು ಹಾಗೂ ಠರಾವುಗಳ ಮೇಲೆ ತೆಗೆದುಕೊಂಡ ಕ್ರಮಗಳ ಅನುಸರಣಾ ವರದಿಯನ್ನು ಪಡೆದು ಮುಂಬರುವ ಮಂಡಳ ಸಭೆಯಲ್ಲಿ ಮಾಹಿತಿಗಾಗಿ ಮಂಡಿಸುವುದು.

(10) ಮಂಡಳ ಸಭೆಯು ಕ.ರಾ.ರ.ಸಾ.ಸಂಸ್ಥೆ. ಮಂಡಳಿ (ಸಭೆ ನಡೆಸುವ) ನಿಯಮಾವಳಿ-1961ರ ನಿಯಮಾವಳಿಗಳನ್ವಯ ನಡೆಯುತ್ತದೆ. ಒಂದು ವರ್ಷದಲ್ಲಿ ಗರಿಷ್ಟ-6 ಮತ್ತು ಕನಿಷ್ಟ-4 ನಿರ್ದೇಶಕರ ಮಂಡಳ ಸಭೆಯನ್ನು ನಡೆಸುವುದಾಗಿರುತ್ತದೆ.

(11) ಮಂಡಳ ಸಭೆಯಲ್ಲಿ ಕೋರಂ ಆಗಲು ಕನಿಷ್ಟ 5 ನಿರ್ದೇಶಕರು ಇರಬೇಕಾಗುತ್ತದೆ. ಈ 5 ಜನರಲ್ಲಿ ಸಾರಿಗೆ ಇಲಾಖೆ ಅಥವಾ ಹಣಕಾಸು ಇಲಾಖೆಯ ಒಬ್ಬ ನಿರ್ದೇಶಕರು ತಪ್ಪದೇ ಇರಬೇಕಾಗುತ್ತದೆ.

(12) ಮಂಡಳ ಸಭೆಯಲ್ಲಿ ಕೋರಂ ಆಗಲು ಕನಿಷ್ಟ ಮೂರನೇಯ ಒಂದು ಭಾಗದಷ್ಟು ನಿರ್ದೇಶಕರು ಇರುವುದಾಗಿದೆ. ಮಂಡಳ ಸಭೆಯಲ್ಲಿ ಕೋರಂ ಆಗಲು ಸರ್ಕಾರದ ಸಾರಿಗೆ ಇಲಾಖೆ ಅಥವಾ ಹಣಕಾಸು ಇಲಾಖೆಯ ಒಬ್ಬ ನಿರ್ದೇಶಕರು ಹಾಜರಿ ಕಡ್ಡಾಯವಾಗಿರುತ್ತದೆ.

(13) ಕಾಲಾವಕಾಶ ಕಡಿಮೆಯಿದ್ದಲ್ಲಿ ಅತೀ ಜರೂರಾದ ವಿಷಯ ಪ್ರಸ್ತಾವನೆಗಳನ್ನು ಪ್ರಸರಣ ಮೂಲಕ ಕರಡು ಠರಾವನ್ನು ಹೊರಡಿಸಿ ಎಲ್ಲಾ ನಿರ್ದೇಶಕರುಗಳಿಂದ ಅನುಮೋದನೆಯನ್ನು ಪಡೆವುದಾಗಿರುತ್ತದೆ.

(14) ಪ್ರಸರಣ ಮೂಲಕ ಹೊರಡಿಸಿದ ಕರಡು ಠರಾವು ಮೂರನೆಯ ಎರಡರಷ್ಟು ನಿರ್ದೇಶಕರ ಮಂಡಳಿಯ ಅನುಮೋದನೆ ಪಡೆಯಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಪ್ರಸ್ತಾವನೆಯು ಸ್ಥಗಿತಗೊಳ್ಳುತ್ತದೆ.

(15) ಕೇಂದ್ರ ಕಛೇರಿಯಲ್ಲಿರುವ ಲಘು ವಾಹನಗಳ ವಾರ್ಷಿಕ ಕಾಂಪ್ರಿಹೆನ್ಸೀವ್ ವಿಮೆಯನ್ನು ನವೀಕರಿಸುವುದು.

(16) ಮಂಡಳಿಯಲ್ಲಿ ಪ್ರಸ್ತುತವಾಗಿ ಅಧಿಕಾರೇತರ ನಿರ್ದೇಶಕರುಗಳನ್ನು ಸರ್ಕಾರವು ನೇಮಿಸಿರುವುದಿಲ್ಲ.

(17) ಈ ಹಿಂದೆ ಜರುಗಿದ ಸಂಸ್ಥೆಯ 62 ನೇ ನಿರ್ದೇಶಕರ ಮಂಡಳ ಸಭೆಯು ದಿನಾಂಕ: 11.06.2020 ರಂದು ಕ.ರಾ.ರ.ಸಾ.ಸಂಸ್ಥೆ., ಕೇಂದ್ರ ಕಛೇರಿ, ಬೆಂಗಳೂರಿನಲ್ಲಿ ಜರುಗಿಸಲಾಗಿದೆ.

(18) ಬೆಂಗಳೂರಿನಲ್ಲಿ ಇರುವ ಸಂಸ್ಥೆಯ ಸಮನ್ವಯ ಶಾಖೆಗೆ ಸಂಬಂದಿಸಿದ ಕಾರ್ಯ ಚಟುವಟಿಕೆಗಳನ್ನು ಸಹ ನೋಡುವುದು.

(19) ನಿರ್ದೇಶಕರ ಮಂಡಳಿಯಲ್ಲಿ ಪ್ರಸ್ತುತ 8 ಜನ ಅಧಿಕಾರಿಯುತ ನಿರ್ದೇಶಕರುಗಳು ಇದ್ದಿರುತ್ತಾರೆ. ನಿರ್ದೇಶಕರುಗಳ ಪಟ್ಟಿಯು ಈ ಕೆಳಗಿನಂತಿದೆ.

ಈ.ಕ.ರ.ಸಾ.ಸಂಸ್ಥೆ., ಕೇಂದ್ರ ಕಛೇರಿ, ಸಾರಿಗೆ ಸದನ, ಮುಖ್ಯ ರಸ್ತೆ, ಕಲಬುರಗಿ,

ಮಂಡಳಿ ನಿರ್ದೇಶಕರ ಪಟ್ಟಿ. ದಿನಾಂಕ: 07.09.2020 ರಂತೆ

| ಕ್ರ. ಸಂ | ಹೆಸರುಗಳು | ಅಧಿಕಾರಿ/ ಅಧಿಕಾರೇತರ | ದೂರವಾಣಿ ಕಛೇರಿ | ಮೊಬೈಲ್ | ಭಾವಚಿತ್ರಗಳು |
|---|---|---|---|---|---|
| 1 | ಶ್ರೀ ರಾಜ್‌ಕುಮಾರ್ ಪಾಟೀಲ್ ತೇಲ್ಕೂರ, ಸನ್ಮಾನ್ಯ ಶಾಸಕರು ಸೇಡಂ ಹಾಗೂ ಅಧ್ಯಕ್ಷರು, ಈ.ಕ.ರ.ಸಾ.ಸಂಸ್ಥೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560001. | ಅಧ್ಯಕ್ಷರು | 080-22383418 080-22377790 chnekrtc@gmail.com | 9731506160 9916727728 (PS) |  |
| 2 | ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001. | ನಿರ್ದೇಶಕರು (ಅಧಿಕಾರಿಯುತ) | 080-22353912(O) 080-22352769(F) secretarytransport @gmail.com transportsarige @gmail.com | 7760991256(PS) |  |
| 3 | ಶ್ರೀ ಶಿವಯೋಗಿ ಸಿ. ಕಳಸದ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಕೆ.ಎಚ್.ರಸ್ತೆ, ಶಾಂತಿ ನಗರ, ಬೆಂಗಳೂರು-560027. | ನಿರ್ದೇಶಕರು (ಅಧಿಕಾರಿಯುತ) | 080-22221125(O) 080-22240330(F) md@ksrtc.org | 7760990002 (PS) |  |
| 4 | ಶ್ರೀಮತಿ ಸಿ. ಶಿಖಾ. ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ, ಕೇಂದ್ರ ಕಛೇರಿ, 4ನೇ ಮಹಡಿ, ಶಾಂತಿ ನಗರ, ಕೆ.ಎಚ್.ರಸ್ತೆ, ಬೆಂಗಳೂರು-560027. | ನಿರ್ದೇಶಕರು (ಅಧಿಕಾರಿಯುತ) | 080-22537501(O) 080-22537504(F) md@mybmtc.com | 7760991009 (PS) |  |

| | | | | | |
|---|---|---|---|---|---|
| 5 | ಶ್ರೀ ಕೃಷ್ಣ ಬಾಜಪೇಯಿ. ಭಾ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು,<br>ವಾ.ಕ.ರ.ಸಾ.ಸಂಸ್ಥೆ,<br>ಕೇಂದ್ರ ಕಛೇರಿ,<br>ಗೋಕುಲ ರಸ್ತೆ,<br>ಹುಬ್ಬಳ್ಳಿ–೫೮೦೦೩೦. | ನಿರ್ದೇಶಕರು<br>(ಅಧಿಕಾರಿಯುತ) | 0836-2333058(O)<br>0836-2332103(F)<br>nwkrtcmd@gmail.com | 7760991999<br>7760991534<br>(PS |  |
| 6 | ಶ್ರೀ ಕೂರ್ಮಾರಾವ್. ಎಂ. ಭಾ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು,<br>ಈ.ಕ.ರ.ಸಾ.ಸಂಸ್ಥೆ,<br>ಕೇಂದ್ರ ಕಛೇರಿ,<br>ಸಾರಿಗೆ ಸದನ, ಮುಖ್ಯ ರಸ್ತೆ,<br>ಕಲಬುರಗಿ–೫೮೫102. | ನಿರ್ದೇಶಕರು<br>(ಅಧಿಕಾರಿಯುತ) | 08472-224192(O)<br>08472-262759(F)<br>08472-262975(F)<br>mdnekrtcglb@gmail.com | 9986884234<br>(PS) |  |
| 7 | ಶ್ರೀ ಪರೇಶ್ ಕುಮಾರ್ ಗೋಯಲ್,<br>ನಿರ್ದೇಶಕರು (ಸಾರಿಗೆ),<br>ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ,<br>ಸಾರಿಗೆ ಭವನ, ನಂ. 1, ಸಂಸದ್ ಮಾರ್ಗ,<br>ನವದೆಹಲಿ–110001. | ನಿರ್ದೇಶಕರು<br>(ಅಧಿಕಾರಿಯುತ)<br>(ಕೇ.ಸ.ಪ್ರತಿನಿಧಿ) | 011-23351967(O)<br>paresh.goel89@gov.in | 9560022730 |  |
| 8 | ಶ್ರೀ ಪುರುಷೋತ್ತಮ ಸಿಂಗ್<br>ವಿಶೇಷಾಧಿಕಾರಿ (ಜಿ.ಪಂ) ಮತ್ತು<br>ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನ ಸೌಧ,<br>ಬೆಂಗಳೂರು–೫೬೦೦೦1. | ನಿರ್ದೇಶಕರು<br>(ಅಧಿಕಾರಿಯುತ) | 080-22032081(O)<br>sopension@gmail.com | 9902733623 |  |